ಹೆಸರುಗಳನ್ನು ರಾಜ್ಯದಲ್ಲಿ ವ್ಯಾಪಕ ಪ್ರಸಾರವುಳ್ಳ ಮೂರು ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.

ರಾಜ್ಯದ ಯೋಜನೆಗೆ ನಿಗದಿಯಾದ ವೆಚ್ಚ.

518 (488): ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್)

ಮಾನ್ಯ ರಾಜ್ಯ ಯೋಜನಾ ಮತ್ತು ಸಾಂಖ್ಯಿಕ ಹಣಕಾಸು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1992–93ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯದಲ್ಲಿನ ಅಭಿವೃದ್ಧಿ ಕೆಲಸಗಳಿಗಾಗಿ ವಿವಿಧ ಯೋಜನೆಗಳಿಗೆ ನಿಗದಿ ಮಾಡಿದ ವೆಚ್ಚ ಎಷ್ಟು ?

ಆ. ಹೀಗೆ ನಿಗದಿ ಮಾಡಿದ ವೆಚ್ಚದ ಹಣವನ್ನು ಉಪಯೋಗಿಸಿಕೊಳ್ಳುವಲ್ಲಿ ರಾಜ್ಯ ಸರ್ಕಾರವು ವಿಫಲವಾಗಿರುವುದು ನಿಜವೇ ?

ಇ. ಹಾಗಿದ್ದಲ್ಲಿ ಈ ವಿಫಲತೆಗೆ ಕಾರಣವೇನು ಹಾಗೂ ಮುಂದಿನ ವರ್ಷಗಳಲ್ಲಿ ಇದನ್ನು ನಿವಾರಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಟಿ. ಎಂ. ಮಂಜುನಾಥ್ (ರಾಜ್ಯ ಯೋಜನಾ ಮತ್ತು ಸಾಂಖ್ಯಿಕ ಹಣಕಾಸು ಮಂತ್ರಿಗಳು):–

ಅ. 1992–93ನೇ ಸಾಲಿಗೆ ಕೇಂದ್ರ ಪುರಸ್ಕೃತ ಕಾರ್ಯಗಳು ಮತ್ತು ಕೇಂದ್ರ ಯೋಜನಾ ಕಾರ್ಯಗಳಿಗೆ ಕೇಂದ್ರದ ಪಾಲು ಒಟ್ಟು ರೂ. 46628 ಲಕ್ಷ (ಆಯವ್ಯಯ ಅಂದಾಜು)

ಆ. ಇಲ್ಲ.

ಇ. ಉದ್ಭವಿಸುವುದಿಲ್ಲ.

ರಾಜ್ಯ ಉಚ್ಚನ್ಯಾಯಾಲಯದ ನ್ಯಾಯಾಧೀಶರ ಹುದ್ದೆಗಳ ಭರ್ತಿ.

519 (928): ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದ ಉಚ್ಚನ್ಯಾಯಾಲಯದಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ?

ಆ. ಉಚ್ಚನ್ಯಾಯಾಲಯದ ಮುಂದೆ ಇತ್ಯರ್ಥವಾಗದೆ ಉಳಿದಿರುವ ವಿವಾದಗಳ ಸಂಖ್ಯೆ ಎಷ್ಟು ?

ಇ. ಖಾಲಿ ಇರುವ ನ್ಯಾಯಾಧೀಶರ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):–

ಅ. 6 (ಆರು ನ್ಯಾಯಾಧೀಶರ ಹುದ್ದೆಗಳು ಖಾಲಿ ಇವೆ)

1. ಖಾಯಂ ನ್ಯಾಯಾಧೀಶರ ಹುದ್ದೆ – 4
2. ಹೆಚ್ಚುವರಿ ನ್ಯಾಯಾಧೀಶರ ಹುದ್ದೆ – 2

ಆ. ದಿನಾಂಕ: 30–11–1992ರಲ್ಲಿ ಒಟ್ಟು 1,12,874 (1,10,368) ಸಿವಿಲ್ ಪ್ರಕರಣಗಳು ಮತ್ತು 2,506 ಕ್ರಿಮಿನಲ್ ಪ್ರಕರಣಗಳು ಬಾಕಿ ಇದ್ದವು.

೫. ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇಮಕಾತಿಯನ್ನು ರಾಷ್ಟ್ರಪತಿಯವರು ಮಾಡುವುದರಿಂದ ಈ ಬಗ್ಗೆ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳುವುದು.

ರಾಜ್ಯದಲ್ಲಿ ಉತ್ಪತ್ತಿಯಾದ ರೆಕ್ಟಿಫೈಡ್ ಸ್ಪಿರಿಟ್

520 (664): ಶ್ರೀ ನೈ. ಕೆ. ರಾಮಯ್ಯ (ಕುಣಿಗಲ್)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ 1992–93ನೇ ಸಾಲಿನಲ್ಲಿ ಉತ್ಪತ್ತಿಯಾದ ರೆಕ್ಟಿಫೈಡ್ ಸ್ಪಿರಿಟ್‌ನ ಪ್ರಮಾಣ ಎಷ್ಟು ?

ಆ. ಈ ರೀತಿ ಉತ್ಪತ್ತಿಯಾದ ಸ್ಪಿರಿಟನ್ನು ಯಾವ ಯಾವ ಸಂಸ್ಥೆಗಳಿಗೆ ಸರ್ಕಾರದಿಂದ ಯಾವ ಯಾವ ಪ್ರಮಾಣದಲ್ಲಿ ನೀಡಲಾಗುತ್ತಿದೆ ?

೫. ಈ ಸಂಸ್ಥೆಯ ಮಾಲೀಕರುಗಳ ಹೆಸರುಗಳನ್ನು ತಿಳಿಸುವುದು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿ):–

ಅ. 1992–93ನೇ ಸಾಲಿನಲ್ಲಿ ಅಂದರೆ ಜುಲೈ 92ರಿಂದ ಜನವರಿ 93ರವರೆಗೆ ರಾಜ್ಯದಲ್ಲಿ 4.30 ಕೋಟಿ ಲೀಟರ್ ರೆಕ್ಟಿಫೈಡ್ ಸ್ಪಿರಿಟ್ ಉತ್ಪಾದನೆ ಆಗಿರುತ್ತದೆ.

ಆ. ಈ ರೀತಿ ಉತ್ಪತ್ತಿಯಾದ ಸ್ಪಿರಿಟನ್ನು ಸಾರಾಯಿ ತಯಾರು ಮಾಡುವ ಬಾಟ್ಲಿಂಗ್ ಘಟಕ ಭಾರತೀಯ ಮದ್ಯ ತಯಾರಿಸುವ ಆಧಾರಿತ ಕೈಗಾರಿಕಾ ಘಟಕ ಡಿನೇಚರ್ ಸ್ಪಿರಿಟ್ ಉಪಯೋಗಿಸುವ ಘಟಕಗಳಿಗೆ ಸರಬರಾಜು ಮಾಡಲಾಗುತ್ತಿದೆ ಮತ್ತು ಹೊರ ರಾಜ್ಯಕ್ಕೂ ಕಳುಹಿಸಲಾಗುತ್ತಿದೆ. ವಿವರಗಳು ಕೆಳಕಂಡಂತಿರುತ್ತದೆ:–

	ಕೋಟಿ ಲೀಟರ್‌ಗಳಲ್ಲಿ
1. ಸಾರಾಯಿ ತಯಾರಿಕೆಗೆ	: 1.46
2. ಭಾ.ತ.ಮ.ಗಳಿಗೆ	: 1.34
3. ಫಾರ್ಮಸಿಟಿಕಲ್ಸ್ (ಔಷಧಿ ತಯಾರಿಕೆ)	: 0.03
4. ರಾಸಾಯನಿಕ ಕೈಗಾರಿಕೆಗಳು	: 0.96
5. ಡಿನೇಚರ್ ಸ್ಪಿರಿಟ್ ಲೈಸನ್ಸ್	: 0.11
6. ಇತರೆ (ಶಿಕ್ಷಣ ಮತ್ತು ಆಸ್ಪತ್ರೆಗಳಿಗೆ)	: 0.04
7. ಹೊರ ರಾಜ್ಯಕ್ಕೆ	: 0.05
ಒಟ್ಟು	3.99

೫. ಅನುಬಂಧದಲ್ಲಿ ವಿವರ ನೀಡಲಾಗಿದೆ.